ರಾಯಚೂರ್‌ನಲ್ಲಿ ಡಿವಿಷನ್ ಹಾಕತಕ್ಕ ಬಗ್ಗೆ ಮಂತ್ರಿಗಳು ಕಾಗೋಡು ತಿಮ್ಮಪ್ಪನವರ ಕಾಲ್ ಅಟೆನ್ಷನ್‌ಗೆ ಉತ್ತರ ಕೊಟ್ಟ ಕಾಲದಲ್ಲಿ ಅಸತ್ಯವಾದ ಹೇಳಿಕೆ ಕೊಟ್ಟಿದ್ದಾರೆ. ಈ ಎರಡು ವಿಷಯಗಳ ಬಗ್ಗೆ ಪ್ರಿವಿಲೇಜ್ ಮೋಷನ್ ಇದೆ. ಇವುಗಳ ಚರ್ಚೆಗೆ ತಾವು ಅನುವು ಮಾಡಿಕೊಡಬೇಕು. ಸಂಬಂಧಪಟ್ಟ ಎಲ್ಲಾ ದಾಖಲಾತಿಗಳನ್ನು ಇಡಲಿಕ್ಕೆ ನಾನು ತಯಾರು ಇದ್ದೇನೆ. ದಯವಿಟ್ಟು ಚರ್ಚೆಗೆ ಅವಕಾಶ ಮಾಡಿಕೊಡಬೇಕು.

ಶ್ರೀ ಕಾಗೋಡು ತಿಮ್ಮಪ್ಪ (ಸಾಗರ).—ತಾಲ್ಲೂಕು ಬೋರ್ಡಿನ ಬಗ್ಗೆ ರೂಲ್ 59ರ ಪ್ರಕಾರ ನೋಟೀಸ್ ಅನ್ನು ಕಳುಹಿಸಿದ್ದೇನೆ. ಅದನ್ನು ಇದುವರೆಗೂ ಚರ್ಚೆಗೆ ತೆಗೆದುಕೊಳ್ಳಲಿಲ್ಲ. ತಾಲ್ಲೂಕು ಬೋರ್ಡ್ ಅವಧಿ ಪೂರ್ಣವಾಗುತ್ತಾ ಇದೆ. ಸರ್ಕಾರಿ ಅಧಿಕಾರಿಗಳನ್ನು ತಾಲ್ಲೂಕು ಬೋರ್ಡ್‌ಗಳಿಗೆ ಒಳಪಡಿಸಬೇಕು ಎಂದು ಇದ್ದಾರೆ. ಇದರ ಬಗ್ಗೆ ಹೇಳಿಕೆ ಕೊಡಬೇಕು ಎಂದು ಕೇಳಿದ್ದೇನೆ.

Mr. DEPUTY SPEAKER.—You have given under what rule ?

Sri KAGODU THIMMAPPA.—Under Rule 59.

Mr. DEPUTY SPEAKER.—Is it posible to take it up now, or can we have it tomorrow ?

Sri M. MALLIKARJUNASWAMY (Minister for Comunity Development and social welfare).—My demand will be coming tomorrow for discussion. We will have it with the demand.—

ಶ್ರೀ ಎಚ್. ಡಿ. ದೇವೇಗೌಡ.—ಡಿಮ್ಯಾಂಡ್‌ನಲ್ಲಿ ಇದನ್ನು ಒಂದುಗೂಡಿಸುವುದು ಬೇಡ. ಚುನಾವಣೆ ನಡೆಯುವುದು ಒಂದು ಭಾಗ ಮತ್ತೊಂದು ಭಾಗ ಚುನಾವಣೆಗಳನ್ನು ನಡೆಸುವವರೆಗೆ ತಾಲ್ಲೂಕು ಬೋರ್ಡ್‌ಗಳ ಅವಧಿ ಮುಂದುವರಿಸಿಕೊಂಡು ಹೋಗಬೇಕು ಎಂದು ಎರಡು ಇಷ್ಯೂ ಇವೆ. ಇದಕ್ಕೆ ಪ್ರತ್ಯೇಕವಾಗಿ ಚರ್ಚೆಗೆ ಅವಕಾಶ ಮಾಡಬೇಕಾಗುತ್ತದೆ. ಮಂತ್ರಿಗಳು ಪ್ರತ್ಯೇಕವಾಗಿ ಉತ್ತರ ಹೇಳಲಿ.

Mr. DEPUTY SPEAKER.—The hon. Leader of the Opposition will please give some cut motions on that partieular motion. Even otherwise the hon. Members will be dilating upon the particular issue. The particular issue is upper most in the mind of Sri Thimmappa. I feel that it can be taken up with the demand because it is a point to be raised there. Sri Thimmappa can agree with it.

2-20 P.M.

ಶ್ರೀ ಕಾಗೋಡು ತಿಮ್ಮಪ್ಪ.—ಡಿಮಾಂಡ್ ಚರ್ಚೆ ಆಗುವ ಸಂದರ್ಭದಲ್ಲಿ ಸಮರ್ಪಕವಾಗಿ ಉತ್ತರ ಬಂದರೆ ಆಯಿತು ಇಲ್ಲದಿದ್ದರೆ ನಾಳೆದ್ದು ಪ್ರತ್ಯೇಕವಾಗಿ ಚರ್ಚೆಗೆ ತೆಗೆದು ಕೊಳ್ಳಬೇಕು.

Cancellation of Examinaeion Centrs at Nonavinakere.

ಶ್ರೀ ಟಿ. ಎಂ. ಮಂಜುನಾಥ (ತಿಪಟೂರು).—ರೂಲ್ 63 ಪ್ರಕಾರ ನೋಟೀಸ್ ಕಳುಹಿಸಿದೆ. ನೊಣವಿನಕೆರೆಗೆ ಇರುವ ಎಕ್ಷಾಮಿನೇಷನ್ ಸೆಂಟರ್ ರದ್ದು ಮಾಡಿದ್ದಾರೆ, ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತಿದೆ. ಅದು ಕೊಟ್ಟು ಬಹಳ ದಿವಸವಾಯಿತು. ಎಕ್ಷಾಮಿನೇಷನ್ ಇಷ್ಟರಲ್ಲೇ ಶುರು ಆಗುತ್ತಿದೆ.

Mr. DEPUTY SPEAKER.—We have to receive the statement from the Government. I will see that it is pursued. I can assure you that our department is anxious to get the reply as early as possible and have it,

ಶ್ರೀ ಕೆ. ಶ್ರೀರಾಮುಲು (ಗಾಂಧಿನಗರ).—ಡಿಸೆಂಬರ್ ತಿಂಗಳಲ್ಲಿ ರೂಲ್ 49 ಪ್ರಕಾರ ಅರ್ಧಗಂಟೆಕಾಲದ ಚರ್ಚೆಗೆ ಅವಕಾಶ ಕೇಳಿದ್ದೆ ಆದಕ್ಕೆ ಅವಕಾಶ ಸಿಕ್ಕಲಿಲ್ಲ. ಪುನಃ 15ನೇ ಮಾರ್ಚ್ 1973ರಲ್ಲಿ ರೂಲ್ 63 ಪ್ರಕಾರ ಕಾಲ್ ಅಟೆನ್ಷನ್ ನೋಟೀಸ್ ಕಳುಹಿಸಿದ್ದೇನೆ. ಅದಕ್ಕೂ ಅವಕಾಶ ಸಿಕ್ಕಲಿಲ್ಲ.

ಶ್ರೀ ಕೊಣಂದೂರು ಲಿಂಗಪ್ಪ.—9ನೇ ತಾರೀಖು ನೋಟೀಸ್ ಕೊಟ್ಟಿದ್ದೆ, ರಾಜ್ಯದ ಬಜಂತ್ರಿ ಸಂಘದ ಅಧ್ಯಕ್ಷರು ಇರುವ ಕಷ್ಟಗಳನ್ನು ಹೇಳಿಕೊಂಡಿದ್ದಾರೆ. ಅವರು ಅತ್ಯಂತ ಕೆಳಮಟ್ಟದ ಜನಾಂಗಕ್ಕೆ ಸೇರಿದವರು. ಅವರಿಗೆ ಜೀವನಕ್ಕೆ ಇಲ್ಲದೆ ಇರುವುದರಿಂದ ತೊಂದರೆಯಾಗಿದೆ. ಇದರ ಬಗ್ಗೆ ಮಂತ್ರಿಗಳು ಉತ್ತರ ಹೇಳಬೇಕು.

ಶ್ರೀ ಬಿ. ಪುಟ್ಟಸ್ವಾಮಯ್ಯ.—ಕ್ಷೌರ ಮಾಡಿಸಿಕೊಳ್ಳುವವರ ಸಂಖ್ಯೆ ಕಡಿಮೆಯಾಗಿದೆ, ಕಾರಣ ಕ್ಷೌರ ಮಾಡಿಸಿಕೊಳ್ಳುವವರಿಗೆ ಚಾರ್ಜ್ ಮಾಡುತ್ತಾ ಇರುವ ರೇಟ್ ಜಾಸ್ತಿಯಾಗಿದೆ. ಮಾನ್ಯ ಮಂತ್ರಿಗಳು ಇದನ್ನು ಹೇಳಬೇಕು.

Mr. DEPUTY SPEAKER.—Mr. Lingappa, you had seen me yesterday evening. If you had given me an inkling, I would have collected all the information. It depends upon the gravity of the situation and of the subject.

ಶ್ರೀ ಕಾಗೋಡು ತಿಮ್ಮಪ್ಪ.—ಸೊರಬ ತಾಲ್ಲೂಕಿನ ಜಡೆ ಹೋಬಳಿಯಲ್ಲಿ ಒಬ್ಬ ಹರಿಜನ ಮಹಿಳೆಯನ್ನು ಅವಮಾನವಾಗಿ ಥಳಿಸಿದ್ದಾರೆ ಎಂದು ಪ್ರಕರಣ ವರದಿಯಾಗಿದೆ, ಇಲ್ಲಿಯವರೆಗೆ ಪೋಲೀಸರು ಏನೂ ಕ್ರಮ ತೆಗೆದುಕೊಂಡಿಲ್ಲ ಎಂದು ವರ್ತಮಾನ ಬಂದಿದೆ. ಈ ಬಗ್ಗೆ ಮಂತ್ರಿಗಳ ಗಮನ ಸೆಳೆಯಬೇಕು ಎಂದು ನೋಟೀಸ್ ಕೊಟ್ಟಿದ್ದೇನೆ. ಆದಷ್ಟು ಜಾಗ್ರತೆ ಸರ್ಕಾರದವರು ಇದಕ್ಕೆ ಉತ್ತರ ಕೊಡಬೇಕೆಂದು ಒತ್ತಾಯ ತರಬೇಕೆಂದು ಕೇಳಿಕೊಳ್ಳುತ್ತೇನೆ.

Mysore Sales Tax (Amendment) Bill 1973–Motion to Consider.

Sri M. Y. GHARPADE.—(Minister for finance) I move :

"That The Mysore Sales Tax (Amendment) Bill, 1973, be taken into consideration."

Mr. DEPUTY SPEAKER.—Motion moved :

"That The Mysore Sales Tax (Amendmnet) Bill, 1973, be taken into consideration."

† ಶ್ರೀ ಎಂ. ವೈ. ಘೋರ್ಪಡೆ.—ಸ್ವಾಮಿ ಈ ಬಿಲ್ಲಿನ ಸ್ಟೇಟ್‌ಮೆಂಟ್ ಆಫ್ ಆಬ್‌ಜೆಕ್ಟ್ಸ್ ಅಂಡ್ ರೀಸನ್ಸ್‌ನಲ್ಲಿ ಇದರ ಉದ್ದಿಶ್ಯ ಏನು ಎಂಬುದನ್ನೂ ಸ್ಪಷ್ಟವಾಗಿ ಹೇಳುವುದಕ್ಕೆ ಪ್ರಯತ್ನ ಮಾಡಿದ್ದೇನೆ. ಮಾನ್ಯ ಸದಸ್ಯರಿಗೆ ಗೊತ್ತಿರುವ ಹಾಗೆ ಕಲವು ಕೋರ್ಟಿನ ತೀರ್ಮಾನಗಳ ಪರಿಣಾಮವಾಗಿ ಸೆಂಟ್ರಲ್ ಸೇಲ್ಸ್‌ಟ್ಯಾಕ್ಸ್ ಆಕ್ಟ್‌ನಲ್ಲಿ ಬದಲಾವಣೆ ಮಾಡಬೇಕಾಗಿದೆ. ಸೆಂಟ್ರಲ್ ಸೇಲ್ಸ್‌ಟ್ಯಾಕ್ಸ್ ಆಕ್ಟ್‌ನಲ್ಲಿ ಕಲವು ಬದಲಾವಣೆಗಳನ್ನು ಮಾಡಿದ್ದಾರೆ. ಅದರಲ್ಲಿ ಸೆಕ್ಷನ್ 14–15 ಏನಿದೆ ಅದಕ್ಕೆ ಅನುಗುಣವಾಗಿ ನಮ್ಮ ಸೇಲ್ಸ್‌ಟ್ಯಾಕ್ಸ್ ಆಕ್ಟಿನಲ್ಲಿ ನೂಕ್ಕ ಬದಲಾವಣೆಗಳನ್ನು ಮಾಡುವ ದೃಷ್ಟಿಯಿಂದ ಈ ಬಿಲ್ಲನ್ನು ತಮ್ಮ ಮುಂದೆ ಇಟ್ಟಿದ್ದೇವೆ. ಇದರಲ್ಲಿ ಈ ಅಮೆಂಡ್‌ಮೆಂಟಿನ ಮುಖ್ಯ ಉದ್ದೇಶ ಇಷ್ಟೆ. ಸ್ಟೇಟ್ ಟ್ಯಾಕ್ಸ್ ರಿಫಂಡ್ ಮಾಡುವಾಗ "Subject to the payment of sales tan on the inter-State sale" ಮಾಡಬೇಕು ಎಂದು ಇದೆ. ಇಂಥ ಒಂದು ಕಂಡಿಷನ್, ಟ್ಯಾಕ್ಸ್ ರೀ ಫಂಡ್ ಮಾಡಬೇಕಾದರೆ ಇಂಟರ್ ಸ್ಟೇಟ್ ಸೇಲ್ಸ್‌ಟ್ಯಾಕ್ಸ್ ಕೊಟ್ಟಿದ್ದರೆ ಮಾತ್ರ ರೀಫಂಡ್ ಮಾಡುತ್ತೇವೆ ಎನ್ನುವ ಕಂಡಿಷನ್ ಸ್ಟೇಟ್ ಸೇಲ್ಸ್‌ಟ್ಯಾಕ್ಸ್ ಆಕ್ಟ್‌ನಲ್ಲಿ ಇರಕೂಡದು, ಸೆಂಟ್ರಲ್ ಆಕ್ಟಿನಲ್ಲಿ ಇರಬಹುದು ಎಂಬುದು ಕೋರ್ಟಿನ ತೀರ್ಮಾನದ ಮುಖ್ಯ ಅಂಶ. ಅದರ ಪ್ರಕಾರ ಸೆಂಟ್ರಲ್ ಟ್ಯಾಕ್ಸ್ ಆಕ್ಟ್‌ನಲ್ಲಿ ಅಮೆಂಡ್‌ಮೆಂಟ್ ಮಾಡಿದ್ದಾರೆ. ಆ ಮೆಂಡ್‌ಮೆಂಟಿನ ಪ್ರಕಾರ ನಮ್ಮ ಸೇಲ್ಸ್‌ಟ್ಯಾಕ್ಸ್ ಆಕ್ಟ್‌ನಲ್ಲಿ